# ತಹಶೀಲ್ದಾರ್ ಸಂಡೂರು ಇವರ ನ್ಯಾಯಾಲಯ,

**ಉಪಸ್ಥಿತರು:-** ಶ್ರೀ.ಎಂ.ಚಂದ್ರಶೇಖರ, ತಹಶೀಲ್ದಾರರು, ಸಂಡೂರು.

**ವಾದಿಗಳು:-** ಶ್ರೀ.ಪಿ.ವೀರಭದ್ರಪ್ಪ ತಂದೆ.ದಿ:ಪಿ.ಗಂಗಾಧರಗೌಡ ಸಾ:ಹೊಸಪೇಟೆ.

**ವಿರುದ್ಧ**

**ಪ್ರತಿವಾದಿಗಳು:-** (1)ಶ್ರೀಮತಿ.ಜಿ.ಯಶೋದ ಗಂಡ.ಶ್ರೀ.ಸದ್ಗುರುನಾಥಶೆಟ್ಟಿ, ಸಾ:ತೋರಣಗಲ್ಲು ರೈ.ನಿ, ಸಂಡೂರು ತಾಲ್ಲೂಕು.

(2)ಕಂದಾಯ ನಿರೀಕ್ಷಕರು ತೋರಣಗಲ್ಲು

ಪೀಠಿಕೆ:-

| ತಾಲ್ಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಸಂಡೂರು | ತೋರಣಗಲ್ಲು | ಕುರೇಕುಪ್ಪ | 230/A/2 | 3.00 |

ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ತೋರಣಗಲ್ಲು ಹೋಬಳಿ, ಕುರೇಕುಪ್ಪ ಗ್ರಾಮದ ಸ.ನಂ. 230/A/2 ವಿಸ್ತೀರ್ಣ 3.00ಎಕರೆ ಪ್ರತಿವಾದಿ-1 ಶ್ರೀಮತಿ.ಜಿ.ಯಶೋದಗಂಡ.ಶ್ರೀ.ಸದ್ಗುರುನಾಥಶೆಟ್ಟಿ, ಸಾ:ತೋರಣಗಲ್ಲು ರೈ.ನಿ, ಸಂಡೂರು ತಾಲ್ಲೂಕು ಇವರ ಹೆಸರಿನಲ್ಲಿರುವಜಮೀನನ್ನು ಉಪನೊಂದಣಾಧಿಕಾರಿಗಳು ಸಂಡೂರು ಇವರ ಡಾಕುಮೆಂಟ್ರ ಪತ್ರಸಂಖ್ಯೆ. SNR-1-02285/2015-16 ದಿನಾಂಕ:05-03-2016 ರಲ್ಲಿ ವಾದಿ ಶ್ರೀ.ಪಿ.ವೀರಭದ್ರಪ್ಪ ತಂದೆ.ದಿ:ಪಿ.ಗಂಗಾಧರಗೌಡ ಸಾ:ಹೊಸಪೇಟೆ ಇವರು ಖರೀದಿಸಿದ ಭೂಮಿ ಸ್ವೀಕೃತಿ ಸಂಖ್ಯೆ 2489/2015-16, ದಿನಾಂಕ:6-3-2016 ರ ವಹಿವಾಟಿನ ಸಂಖ್ಯೆ.68/2015-16 ದಿನಾಂಕ:05-03-2016 ಅನ್ನು ಗ್ರಾಮಲೆಕ್ಕಾಧಿಕಾರಿಗಳು ಕುರೇಕುಪ್ಪ ಇವರು ಹಕ್ಕುಬದಲಾವಣೆ ಎಂ.ಆರ್.ಸಂಖ್ಯೆ H-32/2015-16 ದಿನಾಂಕ:05-03-2016 ರ ವಹಿವಾಟಿನಲ್ಲಿ ದಾಖಲಿಸಿಕೊಂಡು ಸಂಬಂಧಿಸಿದವರಿಗೆ ನಮೂನೆ-21 ನೋಟೀಸು ಜಾರಿಗೊಳಿಸಲಾಗಿ ನಿಗದಿತ 30 ದಿನದೊಳಗಾಗಿ ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಹಿವಾಟಿನ ಸಂಖ್ಯೆ. 68/2015-16 ದಿನಾಂಕ:05-03-2016 ಮತ್ತು ಹಕ್ಕುಬದಲಾವಣೆ ಸಂಖ್ಯೆ MRH-32/2015-16 ದಿನಾಂಕ: 5-3-2016 ಕ್ಕೆ ಸದ್ರಿ ವಿವಾದಿತ ಕುರೇಕುಪ್ಪ ಗ್ರಾಮದ ಸ.ನಂ. 230/A/2 ವಿಸ್ತೀರ್ಣ 3.00 ಎಕರೆ ಜಮೀನನ್ನು ಹಕ್ಕುಬದಲಾವಣೆ ಮಾಡುವ ಕುರಿತು ನಮೂನೆ-21 ನೋಟೀಸನ್ನು ಪ್ರತಿವಾದಿ-1 ಶ್ರೀಮತಿ.ಜಿ.ಯಶೋದ ಗಂಡ. ಶ್ರೀ.ಸದ್ಗುರುನಾಥಶೆಟ್ಟಿ, ಸಾ:ತೋರಣಗಲ್ಲು ರೈ.ನಿ, ಇವರು ತೆಗೆದುಕೊಳ್ಳಲು ನಿರಾಕರಿಸಿದ ಪ್ರಯುಕ್ತ ಪ್ರತಿವಾದಿ-2 ಕಂದಾಯ ನಿರೀಕ್ಷಕರು ತೋರಣಗಲ್ಲು ಇವರು ಮುಂದಿನಕ್ರಮಕ್ಕಾಗಿ ಈ ಕಾರ್ಯಾಲಯಕ್ಕೆ ದಿನಾಂಕ:9-5-2016 ರಂದು ಕಡತವನ್ನು ಸಲ್ಲಿಸಿದ್ದು ಇರುತ್ತದೆ.

ಪ್ರಯುಕ್ತ ಸದ್ರಿ ಪ್ರಕರಣವನ್ನು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129ರಡಿ ದಾಖಲಿಸಿಕೊಂಡು ಉಭಯರಿಗೆ ಹೇಳಿಕೊಳ್ಳುವ ಅವಕಾಶನೀಡಿ ವಾದಿ ಮತ್ತು ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ದಿನಾಂಕ:16-05-2016 ರಂದು ನೋಟೀಸು ನೀಡಲಾಗಿ ವಾದಿ ಹಾಜರಾಗಿದ್ದು, ಪ್ರತಿವಾದಿ-1 ಶ್ರೀಮತಿ.ಜಿ.ಯಶೋದ ಗಂಡ. ಶ್ರೀ.ಸದ್ಗುರುನಾಥಶೆಟ್ಟಿ, ಸಾ:ತೋರಣಗಲ್ಲು ರೈ.ನಿ, ಇವರು ನಮೂನೆ-21 ನೋಟೀಸನ್ನು ತೆಗೆದುಕೊಳ್ಳಲು ನಿರಾಕರಿಸಿದ್ದು, ಪ್ರಯುಕ್ತ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ (31) ರ ಪ್ರಕಾರ ವಿವಾದಾಸ್ಪದ ಕುರೇಕುಪ್ಪ ಗ್ರಾಮದ ಸ.ನಂ. 230/A/2 ವಿಸ್ತೀರ್ಣ 3.00 ಎಕರೆ ಜಮೀನಿನ ಬಾಂಡಗಲ್ ಮೇಲೆ ನಮೂನೆ-21 ನೋಟೀಸು ಅಂಟಿಸಿ ಜಾರಿಮಾಡಲಾಯಿತು. ಸದ್ರಿ ಪ್ರಕರಣದ ವಿಚಾರಣೆಯನ್ನು ದಿನಾಂಕ:13-06-2016 ರಂದು ಪ್ರಾರಂಭಿಸಿ ದಿನಾಂಕ:01-08-2016 ರಂದು ಮುಕ್ತಾಯಗೊಳಿಸಲಾಯಿತು.

ಪ್ರತಿವಾದಿ-1 ಶ್ರೀಮತಿ.ಜಿ.ಯಶೋದ ಗಂಡ.ಶ್ರೀ.ಸದ್ಗುರುನಾಥಶೆಟ್ಟಿ, ಸಾ:ತೋರಣಗಲ್ಲು ರೈ.ನಿ, ಇವರು ತಮ್ಮ ಹೆಸರಿನಲ್ಲಿರುವ ಕುರೇಕುಪ್ಪ ಗ್ರಾಮದ ಸ.ನಂ. 230/A/2 ವಿಸ್ತೀರ್ಣ 3.00 ಎಕರೆ ಜಮೀನನ್ನು ಉಪನೊಂದಣಾಧಿಕಾರಿಗಳು ಸಂಡೂರು ಇವರ ಡಾಕುಮೆಂಟ್ರ ಪತ್ರ ಸಂಖ್ಯೆ. SNR-1-02285/2015-16 ದಿನಾಂಕ:05-03-2016ರಪ್ರಕಾರ ವಾದಿ ಶ್ರೀ.ಪಿ.ವೀರಭದ್ರಪ್ಪ ತಂದೆ. ದಿ:ಪಿ.ಗಂಗಾಧರಗೌಡ ಸಾ:ಹೊಸಪೇಟೆ

(P.T.O)

ಇವರಿಗೆ ಮಾರಾಟ ಮಾಡಿರುವ ಕುರಿತು ನಮೂನೆ–21 ರ ನೋಟೀಸನ್ನು ಜಾರಿಮಾಡಲು ಹೋದಾಗ ತಿರಸ್ಕರಿಸಿದ್ದು, ಸದ್ರಿ ನಮೂನೆ–21 ನೋಟೀಸನ್ನು ಭೂಕಂದಾಯ ಕಾಯ್ದೆ 1964 ಕಲಂ (31) ರ ಪ್ರಕಾರ ಸ.ನಂ. 230/A/2 ವಿಸ್ತೀರ್ಣ 3.00 ಎಕರೆ ಜಮೀನಿನ ಬಾಂಡಗಲ್ ಮೇಲೆ ನಮೂನೆ–21 ನೋಟೀಸು ಅಂಟಿಸಿ ಜಾರಿಮಾಡಲಾಗಿರುತ್ತದೆಂದು ಪ್ರತಿವಾದಿ–2 ಕಂದಾಯ ನಿರೀಕ್ಷಕರು ತೋರಣಗಲ್ಲು ಇವರು ತಿಳಿಸಿದ್ದು ಇರುತ್ತದೆ. ಸದ್ರಿ ಪ್ರಕರಣದಲ್ಲಿ ಪ್ರತಿವಾದಿ–1 ಶ್ರೀಮತಿ.ಜಿ.ಯಶೋದ ಗಂಡ.ಶ್ರೀ.ಸದ್ಗುರುನಾಥಶೆಟ್ಟಿ, ಸಾ:ತೋರಣಗಲ್ಲು ರೈ.ನಿ, ಇವರು ವಿಚಾರಣೆಗೆ ಹಾಜರಾಗಿರುವುದಿಲ್ಲ.

ವಾದಿ ಶ್ರೀ.ಪಿ.ವೀರಭದ್ರಪ್ಪ ತಂದೆ.ದಿ:ಪಿ.ಗಂಗಾಧರಗೌಡ ಸಾ:ಹೊಸಪೇಟೆ ಇವರು ದಿನಾಂಕ: 01–08–2016 ರಂದು ವಿಚಾರಣೆಗೆ ಹಾಜರಾಗಿ, ಪ್ರತಿವಾದಿ–1 ಶ್ರೀಮತಿ.ಜಿ.ಯಶೋದ ಗಂಡ.ಶ್ರೀ.ಸದ್ಗುರುನಾಥಶೆಟ್ಟಿ, ಸಾ:ತೋರಣಗಲ್ಲು ರೈ.ನಿ. ಇವರು ಹೆಸರಿನಲ್ಲಿರುವ ಕುರೇಕುಪ್ಪ ಗ್ರಾಮದ ಸ.ನಂ. 230/A/2 ವಿಸ್ತೀರ್ಣ 3.00 ಎಕರೆ ಜಮೀನನ್ನು ಅವರಿಂದ ಉಪನೊಂದಣಾಧಿಕಾರಿಗಳು ಸಂಡೂರು ಇವರ ಡಾಕುಮೆಂಟ್ರ ಪತ್ರ ಸಂಖ್ಯೆ SNR-1-02285/2015-16 ದಿನಾಂಕ:05-03-2016 ರಲ್ಲಿ ಕ್ರಯಹೊಂದಿದ ಸದ್ರಿ ಜಮೀನನ್ನು ತಮ್ಮ ಸ್ವಾಧೀನದಲ್ಲಿರುವ ಪ್ರಯುಕ್ತ, ತಮ್ಮ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಕೋರಿ ಲಿಖಿತ ಹೇಳಿಕೆ ಸಲ್ಲಿಸಿ ವಾದ ಮಂಡಿಸಿದ್ದು ಇರುತ್ತದೆ.

ಪ್ರತಿವಾದಿ–1 ಶ್ರೀಮತಿ.ಜಿ.ಯಶೋದ ಗಂಡ.ಶ್ರೀ.ಸದ್ಗುರುನಾಥಶೆಟ್ಟಿ, ಸಾ:ತೋರಣಗಲ್ಲು ರೈ.ನಿ, ಇವರ ಹೆಸರಿನಲ್ಲಿರುವ ಕುರೇಕುಪ್ಪ ಗ್ರಾಮದ ಸ.ನಂ. 230/A/2 ವಿಸ್ತೀರ್ಣ 3.00 ಎಕರೆ ಜಮೀನನ್ನು ಉಪನೊಂದಣಾಧಿಕಾರಿಗಳು ಸಂಡೂರು ಇವರ ಡಾಕುಮೆಂಟ್ರ ಪತ್ರ ಸಂಖ್ಯೆ SNR-1-02285/2015-16 ದಿನಾಂಕ:05-03-2016 ರಪ್ರಕಾರ ವಾದಿ ಶ್ರೀ.ಪಿ.ವೀರಭದ್ರಪ್ಪ ತಂದೆ.ದಿ:ಪಿ.ಗಂಗಾಧರಗೌಡ ಸಾ:ಹೊಸಪೇಟೆ ಇವರಿಗೆ ಮಾರಾಟ ಮಾಡಿರುತ್ತಾರೆ.

ಸದರಿ ವಿಷಯದಲ್ಲಿ ಕಂದಾಯ ಅಧಿಕಾರಿಗಳು ನೋಂದಾಯಿತಗೊಂಡ ದಾಖಲೆಗಳ ಆಧಾರದ ಹಿನ್ನಲೆಯಲ್ಲಿ ಹಕ್ಕು ಬದಲಾವಣೆ ಮಾಡುವಾಗ ಹಕ್ಕು ಬದಲಾವಣೆ ತಿರಸ್ಕರಿಸುವ ಅಧಿಕಾರ ಹೊಂದಿರುವುದಿಲ್ಲ ಇಂತಹ ವಿಷಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ತಮ್ಮ ರಿಟ್ ಅರ್ಜಿ ಕ್ರಮ ಸಂಖ್ಯೆ 11323/2001/ದಿನಾಂಕ : 17–04–2002 ರ ಮೂಲಕ (ILR 2002 KAR 4637 P.K Vasudevan vs Deputy Commissioner, Kodagu District, Kodagu) ಈ ಕೆಳಗಿನಂತೆ ಆದೇಶ ನೀಡಿರುತ್ತಾರೆ.

KARNATAKA LAND REVENUE ACT, 1964 (KARNATAKA ACT NO.12 OF 1964)-SECTION 128 AND 129-Write petitioner claming to be the son of Sri P.K.Kumaran challenged the mutation in favour of Respondent No.2 based on Registerd Will of late Sri P.K.Kumaran in repect of land survey No.69/11 measuring 2 acres of Srimangala Village, Virajpet Tq.Kodagu District. The appeal of the petitioner before the Asst.Commissionerfiled by the Respondents was allowed setting aside the order of the Assitant Commissioner. The contention of the petiotioner is that on the basis of disputed 'Will' no mutation could have been effected in favour of Respondent No.2. HELD: Meticulous reading of the provisions of Section 128 discloses the whenever a person aquiresright under the Registerd Document, the revenue authorities are bound to carry out mutation in accordance with the contents of Registerd Document….. The enquiry contemplated under Section 129 of the Karnataka Land Revenue Act Strictly in essence a summary enquiry. The Revenue authorities have no jurisdiction to adjudicate the title and rights of the parties….. The entry in khatedar columns is no proof of possession or title….. The entry of name in

khatedar column carries a liability to pay the tax and it is not a document of title or ownership, It may be one of the incidences or corroborative fact to prove the ownership, but not a conclusive fact of proof of ownership. The authorities who have to act under Section 129 of the act have to go by the prima-facie material. In the instant case, the 2nd Responent's acquisition of right evidently being under Registerd document, the entry of name of 2nd Respondent does not appear to be illegal and contrary to the privisions of Section 128 of the Act. It is open for the petitioner to vindicate his right before the Civil Court and subject to the result of the civil suit, mutation entries had to be confirmed or cancelled as the case may be.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಹಾಗೂ ಪ್ರತಿವಾದಿ-1 ಶ್ರೀಮತಿ.ಜಿ.ಯಶೋದ ಗಂಡ.ಶ್ರೀ.ಸದ್ಗುರುನಾಥಶೆಟ್ಟಿ, ಸಾ:ತೋರಣಗಲ್ಲು ರೈ.ನಿ, ಇವರು ನೊಂದಾಯಿತ ಖರೀದಿ ಪತ್ರದ ಮೂಲಕ ತಮ್ಮ ಒಡೆತನದಲ್ಲಿರುವ ಜಮೀನನ್ನು ವಾದಿ ಶ್ರೀ.ಪಿ.ವೀರಭದ್ರಪ್ಪ ತಂದೆ.ದಿ:ಪಿ.ಗಂಗಾಧರಗೌಡ ಸಾ:ಹೊಸಪೇಟೆ ಇವರಿಗೆ ಮಾರಾಟ ಮಾಡಿರುವುದು ಸಾಬೀತಾಗಿರುವುದರಿಂದ ಹಾಗೂ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಿ ಈಕೆಳಗಿನಂತೆ ಆದೇಶಿಸಲಾಗಿದೆ.

ಸಂ.ಕಂ.ಪಹಣಿ/ಹ.ಬ.ವಿವಾದ/44/2016-17 ದಿನಾಂಕ: 8-08-2016.

29/16-17

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆ, ಸಂದರ್ಭ, ವಾಸ್ತವಾಂಶ ಮತ್ತು ಕಾರಣಗಳಿಂದಾಗಿ ಹಾಗೂ ನನಗೆ ಪ್ರದತ್ತವಾದ ಅಧಿಕಾರದಂತೆ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ನಿಯಮ 129 ಹಾಗೂ ನಿಯಮ 42 ರಂತೆ ಸಂಡೂರು ತಾಲ್ಲೂಕಿನ ತೋರಣಗಲ್ಲು ಹೋಬಳಿಯ ಕುರೇಕುಪ್ಪ ಗ್ರಾಮದ ಸ.ನಂ. 230/A/2 ವಿಸ್ತೀರ್ಣ 3.00 ಎಕರೆ ಜಮೀನನ್ನು ಉಪನೊಂದಣಾಧಿಕಾರಿಗಳು ಸಂಡೂರು ಇವರ ಡಾಕುಮೆಂಟ್ರಿ ಪತ್ರ ಸಂಖ್ಯೆ. SNR-1-02285/2015-16 ದಿನಾಂಕ:05-03-2016 ರ ಪ್ರಕಾರ ವಾದಿ ಶ್ರೀ.ಪಿ.ವೀರಭದ್ರಪ್ಪ ತಂದೆ.ದಿ:ಪಿ.ಗಂಗಾಧರಗೌಡ ಸಾ:ಹೊಸಪೇಟೆ ಇವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ತಯಾರಿಸಿ ಗಣಕೀರಣಗೊಳಿಸಿಕೊಂಡು ಪರಿಶೀಲಿಸಿ ಈ ಆದೇಶವನ್ನು ದಿನಾಂಕ: 8 -08-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

**ತಹಶೀಲ್ದಾರರು, ಸಂಡೂರು.**

ಗೆ,

(1) ವಾದಿ ಹಾಗೂ ಪ್ರತಿವಾದಿಗಳಿಗೆ (ಗ್ರಾಮಲೆಕ್ಕಾಧಿಕಾರಿ ಕುರೇಕುಪ್ಪ ಮುಖಾಂತರ)
(2) ಕಂದಾಯ ನಿರೀಕ್ಷಕರು, ತೋರಣಗಲ್ಲು ಇವರಿಗೆ ಸೂಕ್ತಕ್ರಮಕ್ಕಾಗಿ.
(3) ಗ್ರಾಮಲೆಕ್ಕಿಗರು ಕುರೇಕುಪ್ಪ ಇವರಿಗೆ ಸೂಕ್ತಕ್ರಮಕ್ಕಾಗಿ.
(4) ಈಕಾರ್ಯಾಲಯದ ಗಣಕೀಕರಣ ವಿಭಾಗಕ್ಕೆ.